ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ನಿಮ್ಮ ಹೇಳಿಕೆ ಪ್ರಕಾರ ಕನ್ನಡಿಗರು ಅರ್ಜಿ ಸಲ್ಲಿಸಿರುವವರಲ್ಲಿ ಅವರ ಸಂಖ್ಯೆ ಕಡಿಮೆ, ಕನ್ನಡೇತರರು ಅರ್ಜಿಯನ್ನು ಸಲ್ಲಿಸಿದ್ದಾರೆ. ಕನ್ನಡಿಗರಿಗೆ ಅವಕಾಶ ಇಲ್ಲ ಎಂದು ಹೇಳಿ ಒಪ್ಪಿಕೊಂಡ ಹಾಗೆ ಆಯಿತು.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ನಾನು ಹೇಳಿದ್ದು ಆ ರೀತಿನಾ? ನಾನಂ ಹೇಳಿದ್ದು ಕನ್ನಡಿಗರು ಬಂದಾಗ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಈಗ ಇರುವ ಪಟ್ಟಿಯಲ್ಲಿ ಕನ್ನಡೇತರರು ಎಷ್ಟು. ಕನ್ನಡಿಗರು ಎಷ್ಟು ಎಂದು ಗೊತ್ತಾಗುವುದಿಲ್ಲ ಎಂದು ಹೇಳಿದ್ದೇನೆ, ಇನ್ನು ಮುಂದಾದರೂ ನಾವು ನಮ್ಮ ಹಣಕಾಸಿನ ನಿಗಮಗಳು ಏನು ಇದ್ದಾವೆ, ಕೆಲವೊಂದು ನನ್ನ ಗಮನಕ್ಕೆ ಬಂದಿರುವ ಹಾಗೆ ಟಾಟಾ ಬಿರ್ಲಾ ಅವನ್ನು ನಡೆಸುತ್ತಾರೆ, ನಾವು ಕನ್ನಡಿಗರಿಗೇ ಕೊಟ್ಟಿದ್ದೇವೆ. ಈಗಲೂ ಮಾನ್ಯ ಸದಸ್ಯರು ಹೇಳುವ ಹಾಗೆ ಮಾಡಿ, ಯಾರಾದರೂ ಕನ್ನಡಿಗರು ಬಂದರೆ ಕನ್ನಡಿಗರಿಗೇ ಕೊಡುತ್ತೇವೆ. ಮತ್ತು ಮಾನ್ಯ ಸದಸ್ಯರಿಗೆ ಈಗ ಇರುವ ಪಟ್ಟಿಯಲ್ಲಿ ಕನ್ನಡಿಗರು ಎಷ್ಟು ಜನ ಇದ್ದಾರೆ, ಕನ್ನಡೇತರರು ಎಷ್ಟು ಜನ ಇದ್ದಾರೆ ಎನ್ನುವುದನ್ನು ಬೇಕಾದರೆ ಆಮೇಲೆ ತಿಳಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ೬ ರೋಗಗ್ರಸ್ಥ ಕಂಪನಿಗಳ ಹೆಸರನ್ನು ಕೊಟ್ಟಿದ್ದಾರೆ. ಅವುಗಳ ರೆಕವರಿ ಬಗ್ಗೆ ನಿಮ್ಮ ನಿಲುವು ಏನು? ರೋಗಗ್ರಸ್ಥ ಕಂಪನಿಗಳ ರೆಕವರಿ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಈಗ ನಿಗಮದಿಂದ ದುಡ್ಡು ತೆಗೆದುಕೊಂಡು ರೋಗಗ್ರಸ್ಥವಾದ ಕಂಪನಿಗಳ ಹೆಸರುಗಳು ಈ ಕೆಳಕಂಡಂತೆ ಇವೆ;—

1. Davanagere Sugar Mills, 2. Gangavathi Sugar Mills
2. International Transport Technology System Ltd,
3. Karnataka Wells Ltd., 4. Karnataka Agro-Proteins Ltd.,
5. Karnataka Poly products Ltd.,

ಇವು ಕೆಲವು ಶುಗರ್ ಕಂಪನಿಗಳು ರೋಗಗ್ರಸ್ಥ ಆಗಿವೆ. ಈಗ ಕೆಲವು ಇದರಲ್ಲಿ ಸುಧಾರಣೆ ಆಗಿವೆ. ದಾವಣಗೆರೆ ಶುಗರ್ ಕಂಪನಿ ಈಗ ಲಾಭ ಮಾಡಿದೆ. ಬಾಕಿಯನ್ನು ಸ್ವಲ್ಪ ವಂಟ್ಟಿಗೆ ಕೊಡಲೂ ಶಕ್ತವಾಗಿದೆ. ಗಂಗಾವತಿ ಸಕ್ಕರೆ ಕಾರ್ಖಾನೆ ಬಂದ ಆಗಿತ್ತು, ಈಗ ಪ್ರಾರಂಭ ಆಗಿದೆ, ರೈತರಿಗೆ ಸಮಾಧಾನ ತಂದಿದೆ. ಲಾಭ ಆಥವಾ ಲಕ್ಷ್ಯನು ಆಗದಿದ್ದರೂ ಸಹ ಅದು ತನ್ನ ಸಾಲವನ್ನು ತೀರಿಸುವ ಮಟ್ಟಿಗೆ ಬರುತ್ತದೆ. ಇನ್ನು ಕೆಲವು ಕಂಪನಿಗಳು ಪ್ರಾರಂಭ ಆಗುವುದರಲ್ಲಿದೆ. ನಾವು ಹಾಕಿರುವ ಹಣವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ, ಹಾಗೂ ರೋಗಗ್ರಸ್ಥ ಕಂಪನಿಗಳಿಗೆ ಜೀವ ಬರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಕುಸನೂರಂ (ತಾ. ಗುಲ್ಬರ್ಗಾ) ತಾಂಡಾ ಮತ್ತು ಖಿಜಾನಾ ತಾಂಡಾ (ತಾ. ಚಿತಾಪುರ)ಕೆ ವಿದ್ಯುತ್‌ಕರಣದ ಬಗ್ಗೆ

೨೨೫೪. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಪೂರೈಕೆಯಾಗಿದೆ? ಇನ್ನೂ ಎಷ್ಟು ಹಳ್ಳಿಗಳಿಗೆ ಆಗಬೇಕಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಆ) ಆರ್.ಇ.ಸಿ. ಯೋಜನೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಎಷ್ಟು ತಾಂಡಗಳಿಗೆ ವಿದ್ಯುತ ಪೂರೈಕೆಯಾಗಿದೆ? ಇನ್ನು ಎಷ್ಟು ತಾಂಡಗಳಿಗೆ ಆಗಬೇಕಾಗಿದೆ.

ಇ) ಶಹಬಾದ್ ಮತ ಕ್ಷೇತ್ರದ ಕುಸನೂರಂ ತಾಂಡ (ತಾ. ಗುಲ್ಬರ್ಗಾ) ಮತ್ತು ಖಿಜಾನಾ ತಾಂಡ (ತಾ. ಚಿತಾಪುರ) ಇಲ್ಲಿ ಇನ್ನೂ ವಿದ್ಯುದ್ದೀಕರಣವಾಗದೆ ಇರುವುದು ನಿಜವೇ? ಹಾಗಿದ್ದಲ್ಲಿ ಕಾರಣಗಳೇನು? ಈ ಹಳ್ಳಿಗಳಿಗೆ ಈ ವರ್ಷದಲ್ಲಿ ವಿದ್ಯುದ್ದೀಕರಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು) —

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ೧೯೮೧ರ ಜನಗಣತಿಯಂತೆ ೧೨೯೬ ಕಂದಾಯ ಗ್ರಾಮಗಳ ವಿದ್ಯುದ್ದೀಕರಣವಾಗಿದ್ದು ೪ ಗ್ರಾಮಗಳ ವಿದ್ಯುದ್ದೀಕರಣವಾಗಬೇಕಾಗಿದೆ. (ವಿವರ ಅನುಬಂಧದಲ್ಲಿ ನೀಡಿದೆ.)

ಆ) ೪೬ ತಾಂಡಾಗಳಿಗೆ ವಿದ್ಯುತ್ ಪೂರೈಕೆಯಾಗಿದ್ದ ೩೫೬ ತಾಂಡಾಗಳಿಗೆ ಇನ್ನು ವಿದ್ಯುತ ಪೂರೈಕೆ ಆಗಬೇಕಾಗಿದೆ.

ಇ) ಈ ಎರಡು ತಾಂಡಾಗಳೂ ಹಾಲಿ ಮಂಜೂರಾಗಿರುವ ಯೋಜನೆಗಳಲ್ಲಿ ಸೇರಿಲ್ಲವಾದ್ದರಿಂದ ಇವುಗಳ ವಿದ್ಯುದ್ದೀಕರಣವನ್ನು ಈ ಸಾಲಿನ ಕಾರ್ಯಕ್ರಮದಲ್ಲಿ ಸೇರಿಸಿಲ್ಲ. ಗುಲ್ಬರ್ಗಾ ಜಿಲ್ಲೆಯಲ್ಲಿ ಇನ್ನೂ ಉಳಿದಿರುವ ತಾಂಡಾಗಳನ್ನು ಗುರುತಿಸಿ ಬೇರೆ ಯೋಜನೆಗಳನ್ನು ತಯಾರಿಸಲಾಗುವುದು, ಹಾಗೆ ತಯಾರಿಸುವಾಗ ಈ ತಾಂಡಗಳನ್ನು ಅವುಗಳಲ್ಲಿ ಸೇರಿಸಲಾಗುತ್ತದೆ.

ಅನುಬಂಧ

ಗುಲ್ಬರ್ಗಾ ಜಿಲ್ಲೆಯಲ್ಲಿ ಕಂದಾಯ ಗ್ರಾಮಗಳ ವಿದ್ಯುದ್ದೀಕರಣದ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ವಿದ್ಯುದ್ದೀಕರಣವಾಗಿರುವ ಕಂದಾಯ ಗ್ರಾಮಗಳ ಸಂಖ್ಯೆ	ಹಾಲಿ ವಿದ್ಯುದ್ದೀಕರಣ-ವಾಗಿರಬೇಕಾಗಿರುವ ಕಂದಾಯ ಗ್ರಾಮಗಳ ಸಂಖ್ಯೆ
೧.	ಅಫಜಲ್‌ಪುರ್	೬೮	—
೨.	ಆಲಂದ್	೧೨೮	—
೩.	ಚಿಂಚೋಳಿ	೧೩೨	—
೪.	ಚಿತಾಪುರ	೧೧೭	—
೫.	ಗುಲ್ಬರ್ಗಾ	೧೩೮	—
೬.	ಜೇವರ್ಗಿ	೧೪೩	—
೭.	ಸೇಡಂ	೧೦೪	೧
೮.	ಶಹಾಪುರ	೧೪೬	—
೯.	ಶೋರಾಪುರ	೧೭೧	೩
೧೦.	ಯಾದಗಿರಿ	೧೨೮	—
	ಒಟ್ಟು	೧,೨೯೬	೪

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ ಇನ್ನು ೪ ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಷನ್ ಆದ ನಂತರ ಇಡೀ ರೆವಿನ್ಯೂ ವಿಲೇಜ್‌ಗಳಿಗೆ ಎಲೆಕ್ಟ್ರಿಫಿಕೇಶನ್ ಮಾಡಿದ ಹಾಗೆ ಆಗಂತ್ತದೆಂದು ಮಾನ್ಯ ಸಚಿವರು ತಿಳಿಸಿದ್ದಾರೆ, ಇದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇನ್ನು ಉಳಿದ ನಾಲ್ಕು ಹಳ್ಳಿಗಳಿಗೆ ಯಾವಾಗ ವಿದ್ಯುಚ್ಛಕ್ತಿಯನ್ನು ಪೂರೈಸಿಕೊಡುತ್ತಾರೆ. ನಂತರ ೩೫೬ ತಾಂಡಗಳು ಏನು ಇವೆ, ಇದರಲ್ಲಿ ಎರಡು ತಾಂಡಗಳು ಇವೆ. ೩೫೬ ತಾಂಡಾಗಳಿಗೆ

ಯಾವಾಗ ತೆಗೆದುಕೊಂಡಿದ್ದೀರಿ, ಮತ್ತು ನಮ್ಮ ಕಾರ್ನ್‌ಸ್ಟ್ಯೂಯೆನ್ಸಿಯಲ್ಲಿ ಎರಡು ತಾಂಡಗಳು ಇವೆ. ಅದರ ಹೆಸರು ಕದನ ಮತ್ತು ಕುಸನೂರು ಎಂದು ಹೆಸರು, ೧೧ ಕೆವಿಎ ಲೈನು ತೆಗೆದುಕೊಂಡು ಮುಗಿಸಿಕೊಡುತ್ತೀರಾ. ಇದರ ಬಗ್ಗೆ ವಿಶೇಷ ಕಾಯಿದೆ ತೆಗೆದುಕೊಂಡು ೩-೪ ತಿಂಗಳಲ್ಲಿ ಮುಗಿಸಿ ಕೊಡುತ್ತೀರಾ?

ಶ್ರೀ ಲಕ್ಷ್ಮೀನರಸಿಂಹಯ್ಯ.—Census ವಿಲೇಜ್‌ಗಳಿಗೆ ಏನು ವಿದ್ಯುಚ್ಛಕ್ತಿ ಕಾರ್ಯಕ್ರಮಗಳು ಇವೆ, ಅವು ಈ ವರ್ಷದ ಕಾರ್ಯಕ್ರಮದಲ್ಲಿ ಸೇರಿಕೊಂಡಿವೆ. ಈ ವರ್ಷದ ಕೊನೆಯವರೆಗೆ ಅದಕ್ಕೆ ಅವಧಿ ಇದೆ. ಆದರೂ ಈ ವರ್ಷದ ಕೊನೆಯವರೆಗೆ ಕೇವಲ ನಾಲ್ಕು ಗ್ರಾಮಗಳ ವಿದ್ಯುದ್ದೀಕರಣ ಉಳಿದಿರುವುದರಿಂದ ಅದನ್ನು ಬೇಗ ಮಾಡಿಸುತ್ತೇನೆ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಎರಡು ತಾಂಡಗಳ ಬಗ್ಗೆ ಹೇಳಿದರು. ಆದರ ಸಂಪೂರ್ಣ ವಿವರವನ್ನು ತರಿಸಿಕೊಂಡು ಅದಕ್ಕೆ ಹೆಚ್ಚು ಖರ್ಚು ಆಗದಿದ್ದರೆ ಒಂದು ತಿಂಗಳನಲ್ಲಿ ಅದನ್ನು ಮಾಡಿಕೊಡುತ್ತೇನೆ. ಮಾನ್ಯ ಸದಸ್ಯರಿಗೆ ಈ ಕೆಲಸದಿಂದ ೯೦೦ ಪರ್ಸೆಂಟ್ ಎಲೆಕ್ಟ್ರಿಫಿಕೇಶನ್ ಆಯಿತೆಂದು ಸಮಾಧಾನ ಆಗುವುದಾದರೆ ಮತ್ತು ಇದರಿಂದ ಹೆಚ್ಚು ಖರ್ಚು ಬರದಿದ್ದರೆ ಒಂದು ತಿಂಗಳಿನಲ್ಲಿ ಮಾಡಿಸಿಕೊಡುತ್ತೇನೆ. ಅದಕ್ಕೆ ಹಣ ಹೆಚ್ಚು ಖರ್ಚು ಬಂದರೆ ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಇದಕ್ಕೆ ಕೇವಲ ೬೦ ರಿಂದ ೭೦ ಸಾವಿರ ರೂಪಾಯಿ ಒಳಗೆ ಆಗುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ವಿವರವನ್ನು ತರಿಸಿಕೊಂಡು ಇದನ್ನು ಮಾಡಿಸಿಕೊಡುತ್ತೇನೆ.

ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜಿನ ಪ್ರಮಾಣ

೧೫೮೫ ಶ್ರೀ ಡಿ. ಟಿ. ಜಯಕಂಮಾರ್ (ನಂಜನಗೂಡು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ರವರೆಗೆ ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಪಂಪುಸೆಟ್ಟುಗಳಿದ್ದವು ?

ಆ) ೧೯೮೩ರ ನಂತರ ಎಷ್ಟು ಪಂಪುಸೆಟ್ಟುಗಳನ್ನು ಹಾಕಲಾಗಿದೆ, ಅವುಗಳಲ್ಲಿ ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ?

ಇ) ಪಂಪುಸೆಟ್ಟುಗಳಿಗೆ ಹಾಲಿ ಬೇಡಿಕೆ ಇರುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು ? ಹಾಗೂ ಈ ವಿದ್ಯುತ್ ಬೇಡಿಕೆಯನ್ನು ಯಾವಾಗ ಪೂರೈಸಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ೩೧-೩-೧೯೮೩ರವರೆಗೆ ನಂಜನಗೂಡು ತಾಲ್ಲೂಕಿನಲ್ಲಿ ೧೫೯೭ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿತ್ತು.

ಆ) ೧-೪-೧೯೮೩ ರಿಂದ ೩೧-೩-೧೯೮೮ರವರೆಗೆ ೭೭೧ ಪಂಪುಸೆಟ್ಟುಗಳನ್ನು ಕೂಡಿಸಿರುವ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೆಲಸದ ಪೂರ್ಣತೆಯ ವರದಿ ಬಂದಿದ್ದು ಈ ಅವಧಿಯಲ್ಲಿ ೬೮೪ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ.

ಇ) ದಿನಾಂಕ. ೩೦-೪-೧೯೮೮ರ ವೇಳೆಗೆ ೨೮೯ ಅರ್ಜಿಗಳು ಹಾಕಿ ಉಳಿದಿದ್ದವು. ಇವಗಳ ಪೈಕಿ ೧೨೪ ಅರ್ಜಿದಾರರು ಮಾತ್ರ ಪಂಡಳಿ ನಿಯಮ ಪರಿಪಾಲಿಸಿದ್ದಾರೆ. ಏಳು ಜನರ ಕೆಲಸ ಪೂರೈಸಿದೆ ಉಳಿದವರುಗಳಿಗೆ ಆದ್ಯತೆಯ ಸೂತ್ರದಂತೆ ವಿದ್ಯುತ್ ಒದಗಿಸಲಾಗುತ್ತದೆ, ಇದಕ್ಕೆ ಈಗಿನ ವಾರ್ಷಿಕ ಗರಿಯಂತೆ ೯-೧೦ ತಿಂಗಳುಗಳು ಬೇಕಾಗುತ್ತವೆ.

ಶ್ರೀ ಡಿ. ಟಿ. ಜಯಕಂಮಾರ್.—ನವಂಗೆ ಸ್ವಾತಂತ್ರ್ಯ ಬಂದು ೩೫ ವರ್ಷಗಳು ಆಗುವವರೆಗೆ ೧೩೦೭ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಿದ್ದರೆ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೆ ೧೯೮೩ ರಿಂದ ೧೯೮೮ರವರೆಗೆ ೭೭೧ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು